ಅಸಲು ದಾವಾ ನಂ.407/2017

ಪಿ ಡಬ್ಲ್ಯೂ: 1

(ಸಾಕ್ಷಿಯನ್ನು ಈ ದಿನ ದಿನಾಂಕ.23.07.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಪಾಟೀ ಸವಾಲು ಃ ಪ್ರತಿವಾದಿ 1 ರಿಂದ 3 ಪರ ಶ್ರೀ ಎಸ್ ಎ ಜಿ ವಕೀಲರಿಂದಃ

ಸರ್ವೇ ನಂಬರ 318/2 ಕ್ಷೇತ್ರ 5 ಎಕರೆ 37 ಗುಂಟೆಯ ಜಮೀನಿನ ಮೂಲ ಮಾಲಿಕರು ನಿಂಗಪ್ಪ ಶೇತ ಸಂಧಿ ಎಂದರೆ ಸರಿಯಲ್ಲ. ಸರ್ವೇ ನಂಬರ 318/2 ರಲ್ಲಿನ ಜಮೀನಿನ ಅರ್ಧ ಹಿಸ್ಸೆ ದಿನಾಂಕ 08-02-1954 ರಂದು ಭೀಮಶ್ಯಾ ದಶವಂತ ಎಂಬುವವರು ಶಂಕರೆಪ್ಪ ತಳವಾರ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಡ ನಂಬರ 272 ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ಶಂಕರೆಪ್ಪ ತಳವಾರ ಇವರು ಸದರಿ ಹಿಸ್ಸೆಯನ್ನು ಶರಣಪ್ಪ ಬ್ಯಾಡಗಿಹಾಳ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

ಪ್ರಸ್ತೂತ ದಾವೆಯನ್ನು ಎಷ್ಟು ಕ್ಷೇತ್ರದ ಜಮೀನಿಗೆ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ 2 ಎಕರೆ 38 ಗುಂಟೆ ಕ್ಷೇತ್ರಕ್ಕೆ ದಾವೆ ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಕಬ್ಜೆಯಲ್ಲಿ ನಾವು ಯಾವತ್ತಿಗೂ ಇದ್ದಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಲಕ್ಷ್ಮೀಬಾಯಿ ಎಂಬುವವರು ಕಬ್ಜಾ ವಹಿವಾಟು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸ್ಥವರೆಗೂ ಸಹ 1 ರಿಂದ 3 ನೇ ಪ್ರತಿವಾದಿಯರೇ ದಾವಾ ಆಸ್ತಿ ಕಬ್ಜಾ ವಹಿವಾಟು ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ.

ಸಾಕ್ಷಿಗೆ ತಮ್ಮ ಸಹೋದರಿಯರು ಎಷ್ಟು ಜನ ಇರುತ್ತಾರೆ ಎಂದು ಕೇಳಲಾಗಿ 6 ಜನ ಎಂದು ಹೇಳುತ್ತಾರೆ. ಸದರಿಯವರು ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ

ಅಸಲು ದಾವಾ ನಂಬರ 138/2015 ರಲ್ಲಿ ದಾವೆ ಸಲ್ಲಿಸಿದ್ದರು ಎಂದರೆ ಸಾಕ್ಷಿ ಸಲ್ಲಿಸಿದ್ದು ನಿಜ ಆದರೆ ಪ್ರಸ್ತೂತ ದಾವೆಯ ಆಸ್ತಿಗೂ ಅದಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಪ್ರಸ್ತೂತ ದಾವೆಯ ಆಸ್ತಿಯನ್ನು ಸಹ ಅದರಲ್ಲಿ ಸೇರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಪ್ರಸ್ತೂತ ದಾವೆಯ ಆಸ್ತಿಯನ್ನು ಒಳಗೊಂಡು ಇತರೆ ಆಸ್ತಿಗಳಲ್ಲಿ ಪಾಲು ಆಗಿರುತ್ತದೆ ಎಂದರೆ ಸರಿಯಲ್ಲ. ಅಸಲು ದಾವಾ ನಂಬರ 138/2015 ರಲ್ಲಿ ಪ್ರಸ್ತೂತ ದಾವೆಯ 1 ರಿಂದ 3 ನೇ ಪ್ರತಿವಾದಿಯರನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸರಿ.

ಸರ್ವೇ ನಂಬರ 318/2 ರ 5 ಎಕರೆ 37 ಗುಂಟೆ ಜಮೀನಿನ ಚೆಕ್ಕಬಂದಿ ಬಗ್ಗೆ ಕೇಳಲಾಗಿ ಸಾಕ್ಷಿಯು ಪೂರ್ವಕ್ಕೆ ಪುರಂದರದಾಸ ಮತ್ತು ಶಂಕರೆಪ್ಪ ಭೀಮಶ್ಯಾ ಶಿವಪೂರ ಇವರ ಜಮೀನು, ಉತ್ತರಕ್ಕೆ ಶಂಕರೆಪ್ಪ ಭೀಮಶ್ಯಾ ಶಿವಪೂರ ಇವರ ಜಮೀನು, ಪಶ್ಚಿಮಕ್ಕೆ ಸೋಮಲು ರಾಮಲು ಚವಾಣ ಇವರ ಜಮೀನು ಮತ್ತು ದಕ್ಷಿಣಕ್ಕೆ ದುಂಡಪ್ಪ ಶಿವಪ್ಪ ಬ್ಯಾಕೋಡ ಇವರ ಜಮೀನುಗಳು ಇರುತ್ತವೆ.

ಈಗ ಹೇಳಿದ ಚೆಕ್ಕಬಂದಿಯಲ್ಲಿ 5 ಎಕರೆ 37 ಗುಂಟೆ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರಸ್ತೂತ ದಾವೆ ದಾಖಲು ಮಾಡುವ ಮುಂಚೆ ಪೋಲಿಸ್ ಠಾಣೆಗೆ ಯಾವಾಗ ಹೋಗಿದ್ದಿರಾ ಎಂದರೆ ಸಾಕ್ಷಿ ಹೋಗಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಪ್ರಸ್ತೂತ ದಾವೆಯನ್ನು ಪ್ರತಿವಾದಿಯರು ತಮ್ಮ ಸ್ವಾಧಿನಕ್ಕೆ ಅಡತಡೆ ಉಂಟು ಮಾಡುತ್ತಿದ್ದರಿಂದ ಸಲ್ಲಿಸಿದ್ದು ಯಾವಾಗ ಅಡೆತಡೆ ಮಾಡಿರುತ್ತಾರೆ ಎಂದು ಕೇಳಲಾಗಿ 2015 ರಲ್ಲಿ ಎಂದು ನುಡಿದಿರುತ್ತಾರೆ.

ಸಾಕ್ಷಿಗೆ ತಮ್ಮ ತಂದೆ ಯಾವಾಗ ದಾವಾ ಜಮೀನನ್ನು ಖರೀದಿ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಯಾವಾಗ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಜಮೀನನ್ನು ಖರೀದಿ ಮಾಡಿದ ನಂತರ ಯಾವಾಗಲು ಸ್ವಾಧಿನದಲ್ಲಿದ್ದಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ 1 ತೋರಿಸಿ ಅದರಲ್ಲಿ ಶಂಕರೆಪ್ಪ ಭೀಮಶ್ಯಾ ಶಿವಪೂರ ಹಾಗೂ ಪುರಂದರದಾಸ ಶಿವಪೂರ ಇವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ . ನಾನಾಗಲಿ ನನ್ನ ಅಣ್ಣ ತಮ್ಮಂದಿರಾಗಲಿ ಪ್ರಸ್ತೂತ ದಾವಾ ಆಸ್ತಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.